

# ‘ನಾಲ್ಕಾಣೆ’

ಸ್ವಾಮಿ ಮಂಗಳಾತ್ಮಾನಂದ

## ವಾರಾಣಸಿ ರಾಮಕೃಷ್ಣ ಸೇವಾಶ್ರಮದ ಆರಂಭದ ಕಥೆ

### ಭಾಗ ೩

ಅನಂತರ ಬರುವ ಜಗನ್ನಾಥನ ರಥಯಾತ್ರೆಯಂದು, ಸ್ವಾಮಿ ಶಿವಾನಂದಜಿಯವರು ಶ್ರೀರಾಮಕೃಷ್ಣರ ಒಂದು ಛಾಯಾ ಚಿತ್ರವನ್ನು ಪ್ರತಿಷ್ಠಾಪಿಸಿ ವಿಶೇಷ ಪೂಜೆ, ಹವನ ಇತ್ಯಾದಿಗಳನ್ನು ನೆರವೇರಿಸಿದರು. ಈ ಆಶ್ರಮದ ಹೆಸರು ಶ್ರೀರಾಮಕೃಷ್ಣ ಅದ್ವೈತ ಆಶ್ರಮ ಎಂದು ಮಾಡಲಾಯಿತು. ಆದರೆ ಯಾವುದೇ ತರದ ಆದಾಯವಿಲ್ಲದ ಶಿವಾನಂದಜಿ ಬಹಳ ಕಷ್ಟಪಡ ಬೇಕಾಯಿತು. ಶಿವಾನಂದಜಿ ಬಿಂಗರಾಜನ ಹತ್ತಿರ ಬೇಡಲು ಹೋದರೆ ಆತ, ''ಸ್ವಾಮಿ ವಿವೇಕಾನಂದರು ಈಗ ಇಲ್ಲ, ಹಣ ಕೊಡಲು ಸಾಧ್ಯವಿಲ್ಲ'' ಎಂದು ಹೇಳಿ ಸಾಧುವಿನ ಕೈಗೆ ಐವತ್ತು ರೂಪಾಯಿ ಕೊಟ್ಟು ಕಳುಹಿಸಿಬಿಟ್ಟ. ಶಿವಾನಂದಜಿಯವರ ಹತ್ತಿರ ಒಂದು ಡಬ್ಬಿಯಲ್ಲಿ ಎಪ್ಪತ್ತೈದು ರೂಪಾಯಿ ಇದ್ದವು. ಅದನ್ನು ಕೆಲಸಕ್ಕೆ ಇದ್ದ ಹುಡುಗನೊಬ್ಬ ಕದ್ದು ಪತ್ತೆ ಇಲ್ಲದೆ ಪರಾರಿಯಾದ! ಶ್ರೀ ಗುರುಮಹಾರಾಜರಿಗೆ ಕಲ್ಲು ಸಕ್ಕರೆ, ಶಿವಾನಂದರಿಗೆ ಗಂಗೆಯ ನೀರೇ ಗತಿ! ತಿಂಗಳ ಬಾಡಿಗೆ ಕೊಡಲೂ ಕಾಸಿಲ್ಲ! ಬಾಡಿಗೆ ಕೊಡಲಿಲ್ಲ ಎಂಬ ಕಾರಣಕ್ಕೆ ಮನೆ ಮಾಲೀಕನು ಸ್ವಾಮಿ ಶಿವಾನಂದಜಿಯವರನ್ನು ಕೊಠಡಿಯೊಳಗೆ ಕೂಡಿ ಹಾಕಿದ. ಈ ವರ್ತಮಾನವು ಕೇದಾರ ಬಾಬಾಗೆ (ಸ್ವಾಮಿ ಅಚಲಾನಂದ) ತಿಳಿದು ಅವರು ಕೂಡಲೇ ಬಂದು ಸಮಸ್ಯೆಯನ್ನು ನಿವಾರಿಸಿ ದರು. ಈ ಅಪಮಾನವೂ ಕೂಡ ಜೀವನದ ಒಂದು ಭಾಗ ಎಂದು ಯಾರಿಗೂ ಹೇಳದೆ ಮೌನವಾಗಿ ಸ್ವೀಕರಿಸಿದ್ದರು.

ಸ್ವಾಮೀಜಿ ಶಿವಾನಂದಜಿಯವರಿಗೆ ಹೇಳಿದ್ದರು : ಕಾಶೀ ಧಾಮದಲ್ಲಿ ನನ್ನದು ಕೊನೆಯ ಕೆಲಸ ಎಂದು. ಕಾಶೀಕ್ಷೇತ್ರದಲ್ಲಿ ಆಶ್ರಮದ ಉದ್ಘಾಟನೆ ಆದ ದಿನವೇ ಅವರು ಮಹಾಸಮಾಧಿ ಯನ್ನು ಹೊಂದಿದರು. ಮುಂದಿನ ದಿನಗಳಲ್ಲಿ ‘ಖಜಾಂಚಿ ಬಗೀಚಾ’ವನ್ನು ಪೂರ್ಣವಾಗಿ ಅದ್ವೈತ ಆಶ್ರಮ ಮತ್ತು ಸೇವಾ ಶ್ರಮಕ್ಕಾಗಿ ಖರೀದಿಸಲಾಯಿತು. ೧೯೩೭ರಲ್ಲಿ ಶ್ರೀರಾಮಕೃಷ್ಣರ ವಿಗ್ರಹವನ್ನು ಪ್ರತಿಷ್ಠಾಪಿಸಲಾಯಿತು. ಸ್ವಾಮಿ ಶಿವಾನಂದಜಿ ಮಹಾರಾಜರು ಕಾಶೀಧಾಮದಲ್ಲಿ ೧೯೦೭ರ ತನಕ ಇದ್ದರು. ಒಂದು ಅಘಟಿತ ಘಟನೆ ಇಲ್ಲಿ ಉಲ್ಲೇಖನೀಯ. ಒಂದು ಸಲ ಅದ್ವೈತ ಆಶ್ರಮದಲ್ಲಿ ಕಳ್ಳತನವಾಯಿತು. ಶ್ರೀಗುರುಮಹಾ ರಾಜರ ಪೂಜೆಗೆ ಸಂಬಂಧಪಟ್ಟ ಪಾತ್ರೆ, ಬಟ್ಟೆ ಇತ್ಯಾದಿಗಳನ್ನು ಕಳ್ಳತನ ಮಾಡಿದರು. ಇದರ ಜೊತೆಗೆ ಚಿಕ್ಕದೊಂದು ಅಲ್ಯೂ ಮಿನಿಯಮ್ ಡಬ್ಬಿ ಇತ್ತು . ಈ ಕರಡಿಗೆಯಲ್ಲಿ ಅತಿ ಪವಿತ್ರತಮ ಶ್ರೀಗುರುಮಹಾರಾಜರ ಅಸ್ಥಿ-ಅವಶೇಷಗಳಿದ್ದವು. ಮರುದಿನ ಆಶ್ರಮದಿಂದ ಒಂದಷ್ಟು ದೂರ ಮರದ ಕೆಳಗೆ ಕಳ್ಳರು ಉಪ ಯೋಗವಿಲ್ಲದ ವಸ್ತುಗಳನ್ನು ಬಿಸಾಡಿದ್ದರು. ಅಲ್ಲಿ ಅಲ್ಯೂ ಮಿನಿಯಂ ಕರಡಿಗೆ ಸಿಕ್ಕಿತು; ಅದರೊಳಗಿನ ‘ಆತ್ಮಾರಾಮ’ವು (ಶ್ರೀರಾಮಕೃಷ್ಣರ ಅಸ್ಥಿಗೆ ಹಾಗೆ ಹೇಳುತ್ತಾರೆ) ಚೆಲ್ಲಾಪಿಲ್ಲಿಯಾಗಿ ಕಣ್ಣಿಗೂ ಕಾಣಿಸಲಿಲ್ಲ! ಆಗ ಮಹಾಪುರುಷ ಶಿವಾನಂದಜಿ ಹೇಳಿ ದ್ದರು ''ಈ ಜಾಗವೆಲ್ಲ ಗುರು ಮಹಾರಾಜರಿಗೆ ಸೇರಿದ್ದು, ಅವರೇ ಇಲ್ಲಿಗೆ ಬಂದು ಕುಳಿತಿದ್ದಾರೆ.'' ಮುಂದಿನ ದಿನಗಳಲ್ಲಿ ಆ ಜಾಗ ವನ್ನೆಲ್ಲ ಸೇವಾಶ್ರಮಕ್ಕೆ ಖರೀದಿಸಲಾಯಿತು.

ಇಲ್ಲಿ ತನಕ ನಾವು ನಾಲ್ಕಾಣೆಗಳ ಮಹತ್ತ್ವವನ್ನು ನೋಡಿ ದೆವು. ಈಗಿನ ನಮ್ಮ ಯುವಜನತೆಗೆ ನಾಲ್ಕಾಣೆ ಎಂದರೆ ಏನು ಎನ್ನುವ ಪರಿಸ್ಥಿತಿ ಬಂದಿದೆ. ಭಾರತ ಸರಕಾರವು ಇತ್ತೀಚಿನ ವರ್ಷಗಳಲ್ಲಿ ಐವತ್ತು ಪೈಸೆಗಳ ತನಕ ಎಲ್ಲಾ ನಾಣ್ಯಗಳನ್ನು ರದ್ದು ಪಡಿಸಿದೆ. ಬಹುಶಃ ಇದು ಭಾರತದ ಸಿರಿವಂತಿಕೆಯ ಚಿಹ್ನೆಯೂ ಇರಬಹುದು! ಕಾಶೀ ರಾಮಕೃಷ್ಣ ಮಿಷನ್ ಸೇವಾಶ್ರಮಕ್ಕೆ ಈಗ ಸುಮಾರು ನೂರಾಇಪ್ಪತ್ತನಾಲ್ಕು ವರ್ಷಗಳು. ಸೇವಾಶ್ರಮಕ್ಕೆ ಸಹಸ್ರಾರು ಜನ ಸಾಧುಗಳು, ಸ್ವಯಂಸೇವಕರು, ಗೃಹಸ್ಥರು ನಿಃಸ್ವಾರ್ಥಸೇವೆ ಸಲ್ಲಿಸಿದ್ದಾರೆ. ಈಗಲೂ ಸಾಧು ಬ್ರಹ್ಮಚಾರಿಗಳ ಜೊತೆಗೆ ಕೆಲವು ಜನ ಸೇವಾವ್ರತಿಗಳು ಸೇವೆ ಸಲ್ಲಿಸುತ್ತಿದ್ದಾರೆ. ಸೇವಾಶ್ರಮದ ಆರಂಭದ ಕೆಲವು ವರ್ಷಗಳಲ್ಲಿ ಸಾಧುಗಳೇ ರೋಗಿಗಳ ಬಟ್ಟೆ ತೊಳೆಯುವುದು, ಅಡಿಗೆ ಮಾಡುವುದು,

ಆವರಣ ಗುಡಿಸುವುದು, ಪಾಯಿಖಾನೆ ಶುಚಿಮಾಡುವುದು ಇತ್ಯಾದಿ ಮಾಡುತ್ತಿದ್ದರು.

ಇಲ್ಲೊಂದು ಘಟನೆಯನ್ನು ನಾವು ಉಲ್ಲೇಖಿಸಬಹುದು; ಅದು ಇಂದಿಗೆ ಸುಮಾರು ಐವತ್ತು ವರ್ಷಗಳ ಹಿಂದೆ ನಡೆದದ್ದು. ಆಗ ಝಾಡಮಾಲಿಗಳು ಯಾರೂ ಇರಲಿಲ್ಲ. ರೋಗಿಗಳ ಯೂರಿನ್ ಪಾಟ್, ಕಕ್ಕಸ್ಸು, ವಾಂತಿಭೇದಿಗಳಿಗಾಗಿ ಉಪಯೋಗಿಸುವ ಪಾತ್ರೆಗಳನ್ನು ಸಾಧುಗಳೇ ತೊಳೆದಿಡುತ್ತಿದ್ದರು. ಈ ಮಧ್ಯೆ ಬಹಳಷ್ಟು ದಿನ ಈ ಪರಿಕರಗಳನ್ನು ಯಾರೋ ತೊಳೆದಿಡುತ್ತಿದ್ದರು. ಯಾರು ಈ ಕೆಲಸಗಳನ್ನು ಮಾಡುತ್ತಾರೆಂದು ಯಾರಿಗೂ ಸುಳಿವು ಇರುತ್ತಿರಲಿಲ್ಲ.

ಆ ಕಾಲದಲ್ಲಿ ಈಗಿನ ಹಾಗೆ ಕ್ಯಾಮೆರಾಗಳು ಇರಲಿಲ್ಲ. ಈ ರಹಸ್ಯವನ್ನು ಭೇದಿಸುವ ಸಲುವಾಗಿ ಒಬ್ಬ ಸಾಧುಗಳು ಬೆಳಗ್ಗೆ ಬೇಗನೆ ಕತ್ತಲು ಇರುವಾಗಲೇ ವಾರ್ಡಿನಲ್ಲಿ ಅವಿತು ಕುಳಿತರು. ರೋಗಿಗಳೆಲ್ಲ ಮಲಗಿದ್ದರು. ಸೇವಾಶ್ರಮದ ಕಾರ್ಯದರ್ಶಿ (ದೊಡ್ಡ ಸ್ವಾಮೀಜಿ) ಸ್ವತಃ ತಾವೇ ಈ ಪರಿಕರಗಳನ್ನು ತೊಳೆಯುತ್ತಿದ್ದಾರೆ! ಅವಿತುಕೊಂಡಿದ್ದ ಸ್ವಾಮಿಗಳು ಎದುರು ಬಂದಾಗ ಕಾರ್ಯದರ್ಶಿ ಸ್ವಾಮಿಗಳು ಹೇಳಿದರು, ''ನೀವೆಲ್ಲ ನಾರಾಯಣನ ಪೂಜೆ ಮಾಡುತ್ತಿದ್ದೀರಿ, ನಾನೇನು ಮಾಡುತ್ತಿಲ್ಲವಲ್ಲ? ಈ ಕೆಲಸವನ್ನು ನನಗೆ ಮಾಡಲು ನೀವುಗಳು ಬಿಡುವುದಿಲ್ಲ, ಅದಕ್ಕಾಗಿ ರಹಸ್ಯವಾಗಿ ಮಾಡುತ್ತಿದ್ದೇನೆ!'' (ರೋಗಿಗಳನ್ನು ಇಲ್ಲಿ ನಾರಾಯಣ ಎಂದೇ ಕರೆಯುತ್ತಾರೆ.)

ಬನಬಿಹಾರಿ ಬಾಬಾರ ಬಗ್ಗೆ ಬರೆಯದಿದ್ದರೆ ಈ ಲೇಖನ ಅಪೂರ್ಣವಾಗುವುದೇ ಸರಿ. ಸ್ವಾಮಿ ಮುಕ್ತಾನಂದಜಿಯವರು ಕಾಶೀಧಾಮದಲ್ಲಿಯೇ ಬೋನ್‌ಬಾಬಾ ಎಂದೇ ಹೆಸರು ಗಳಿಸಿದ್ದರು. ಅವರು ಸೇವಾಶ್ರಮದಲ್ಲಿ ತನ್ನ ಜೀವನವೆಲ್ಲ ರೋಗಿಗಳ ಗಾಯದ ಕೊಳೆ ತೆಗೆದು ಬ್ಯಾಂಡೇಜ್ ಹಾಕಿಯೇ ಕಳೆದದ್ದು. ಧನ್ವಂತರಿ ದೇವರು ಬಹುಶಃ ಅವರ ಕೈಗಳಲ್ಲಿ ವಾಸಿಸುತ್ತಿದ್ದ! ಬ್ಯಾಂಡೇಜ್ ಕಟ್ಟುವುದರಲ್ಲಿ ಅವರು ಸಿದ್ಧಹಸ್ತರಾಗಿದ್ದರು. ದೀರ್ಘಕಾಲದಿಂದ ಕೊಳೆತು ನಾರುವ ಗಾಯಗಳನ್ನು ಅವರು ವಾಸಿ ಮಾಡಿ ಕೊಡುತ್ತಿದ್ದರು. ಆಗಿನ ಕಾಲದ ದೊಡ್ಡ ದೊಡ್ಡ ಡಾಕ್ಟರ್‌ಗಳೇ ವಾಸಿ ಮಾಡಲಾಗದ ತಮ್ಮ ರೋಗಿಗಳನ್ನು ಇವರ ಹತ್ತಿರ ಕರೆದುಕೊಂಡು ಬರುತ್ತಿದ್ದರು! ಬೋನ್‌ಬಾಬಾರ ಕೈಯಲ್ಲಿ ಅಂತಹ ಗಾಯಗಳು ಕೆಲವೇ ದಿನಗಳಲ್ಲಿ ಒಣಗಿ ವಾಸಿಯಾಗುತ್ತಿದ್ದವು. ಅವರು ಡ್ರೆಸಿಂಗ್ ಕೊಠಡಿಯನ್ನು ದೇವರ ಮನೆಯನ್ನಾಗಿ ಪರಿವರ್ತಿಸಿದ್ದರು.

ಸ್ವಾಮಿ ಭೂತೇಶಾನಂದಜಿ ಮಹಾರಾಜರು ರಾಜ್‌ಕೋಟ್ ಆಶ್ರಮದಲ್ಲಿರುವಾಗ ಅವರ ಎಡ ಭುಜಕ್ಕೆ ಒಂದು ಗಾಯವಾಗಿ, ಅದು ಆರು ತಿಂಗಳು ಗುಣವಾಗಿರಲಿಲ್ಲ. ಅವರಿಗೆ ಯಾರೋ ಸಲಹೆ ಕೊಟ್ಟರು, ಕಾಶಿಯ ಬೋನ್‌ಬಾಬಾರ ಹತ್ತಿರ ಹೋಗಲು. ಭೂತೇಶಾನಂದಜಿಯವರು ಕಾಶೀ ಸೇವಾಶ್ರಮಕ್ಕೆ ಬಂದು ಹದಿನೈದು ದಿನಗಳಲ್ಲಿ ಆ ಗಾಯ ವಾಸಿಯಾಯಿತು!

ಈಗಲೂ ಸೇವಾಶ್ರಮದಲ್ಲಿ ಮಹಿಳೆಯರಿಗಾಗಿ, ಗಂಡಸರಿಗಾಗಿ ಕೆಲವು ಜನರಲ್ ವಾರ್ಡ್‌ಗಳಿವೆ. ಈ ವಾರ್ಡ್‌ಗಳಲ್ಲಿ ಔಷಧಿ ಮತ್ತು ಊಟ ಉಚಿತವಾಗಿ ಕೊಡಲಾಗುತ್ತದೆ. ಸ್ವತಂತ್ರ ಭಾರತದ, ಆರೋಗ್ಯ ಇಲಾಖೆಯ ನಿಯಮಗಳಿಗನುಸಾರವಾಗಿ ಅರ್ಹ ಪದವಿಗಳಿಲ್ಲದೆ ಚಿಕಿತ್ಸೆ ಕೊಡಲು ಸಾಧ್ಯವಿಲ್ಲ. ಈಗ ಸಾಧುಗಳು ಆಸ್ಪತ್ರೆಯ ಉಸ್ತುವಾರಿಗಳನ್ನು ಮಾತ್ರ ನೋಡಿಕೊಳ್ಳುತ್ತಾರೆ. ಈಗಿನ ದೇಶದ ಆರ್ಥಿಕ ಪರಿಸ್ಥಿತಿ ಉತ್ತಮವಾಗಿ ಜನರಲ್ ವಾರ್ಡಿಗೆ ಬೇಡಿಕೆ ಕಡಿಮೆಯಾಗಿ, ವೈಯಕ್ತಿಕ ಕೊಠಡಿಗಳಿಗೆ ಬೇಡಿಕೆ ಹೆಚ್ಚಾಗುತ್ತಿದೆ. ಇಲ್ಲಿ ತುರ್ತು ಚಿಕಿತ್ಸಾ ವಿಭಾಗವು (emergency) ದಿನದ 'ಇಪ್ಪತ್ತನಾಲ್ಕು ಗಂಟೆಯೂ ತೆರೆದಿರುತ್ತದೆ. ದಕ್ಷಿಣ ಭಾರತದಿಂದ ಬಂದ ಯಾತ್ರಾರ್ಥಿಗಳಿಗೆ ಕಾಶಿಗೆ ಬಂದ ತಕ್ಷಣ ವಾಂತಿ-ಭೇದಿ ಉಂಟಾಗುತ್ತದೆ. ಹೆಚ್ಚಿನ ಯಾತ್ರಿಗಳು ಈ ಆಸ್ಪತ್ರೆಗೆ ಬಂದೇ ಬರುತ್ತಾರೆ. ಹೊರರೋಗಿ ವಿಭಾಗಕ್ಕೆ ಒಂದು ದಿನದಲ್ಲಿ ಸುಮಾರು ಏಳುನೂರು ರೋಗಿಗಳು ಬರುತ್ತಾರೆ. ಈಗಲೂ ಸುಮಾರು ಮುನ್ನೂರು ಮೈಲಿ ದೂರದಿಂದ ಈ ಆಸ್ಪತ್ರೆಗೆ ರೋಗಿಗಳು ಬರುತ್ತಾರೆ. ಈಗ ಸೇವಾಶ್ರಮವು ಆಧುನಿಕ ಕಾಲಕ್ಕೆ ಬೇಕಾದ ಹಾಗೆ, ಸುಸಜ್ಜಿತ ಪ್ರಯೋಗಾಲಯ, ಶಸ್ತ್ರಚಿಕಿತ್ಸಾ ವಿಭಾಗ, ಆಧುನಿಕ ಪರಿಕರಗಳೊಂದಿಗೆ ಪರಿವರ್ತನೆಗೊಂಡಿದೆ.

ಸೇವಾಶ್ರಮಕ್ಕೆ ಸ್ಥಳೀಯರು 'ಕೌಡಿಯ ಹಾಸ್ಪತಲ್' ಎಂದು ಕರೆಯುತ್ತಾರೆ. ಆಗಂತುಕರು ದಾರಿಹೋಕರನ್ನು 'ರಾಮಕೃಷ್ಣ ಮಿಷನ್' ಎಂದು ಕೇಳಿದರೆ, ಸ್ಥಳೀಯರಲ್ಲಿ ಬಹು ಜನರಿಗೆ ಅದು ಗೊತ್ತೇ ಇಲ್ಲ. ಬದಲಿಗೆ 'ಕೌಡಿಯ ಹಾಸ್ಪತಲ್' ಎಂದು ಹೇಳಿದರೆ, ಕಾಶಿಯ ಯಾವುದೇ ಮೂಲೆಯಲ್ಲಿದ್ದರೂ ನಿಮಗೆ ದಾರಿ ತೋರಿಸುತ್ತಾರೆ. ಇದಕ್ಕೊಂದು ಹಿನ್ನೆಲೆ ಕೂಡ ಉಂಟು. ಒಂದು ಸಲ ಸ್ವಾಮಿ ಬ್ರಹ್ಮಾನಂದಜಿ ಮಹಾರಾಜರು ಪುರೀಕ್ಷೇತ್ರದಿಂದ ಬರುವಾಗ ಕಡಲಲ್ಲಿ ಸಿಗುವ ಕವಡೆಗಳನ್ನು ತಂದಿದ್ದರು. ಅವುಗಳನ್ನು ಸೇವಾಶ್ರಮ ಗೇಟಿನ ಎರಡೂ ಬದಿಗೆ ಅಂಟಿಸಿ ಸಿಂಗರಿಸಿದ್ದರು. ಇದನ್ನು ನೋಡಿದ ಸ್ಥಳೀಯರು 'ಕೌಡೀಯ (Cowrie) ಹಾಸ್ಪತಲ್' ಎಂದು ಕರೆಯಲಾರಂಭಿಸಿದರು. ಇಲ್ಲಿ ಕವಡೆ ಕಾಸಿನ ಖರ್ಚಿಲ್ಲದೆ ಚಿಕಿತ್ಸೆಯಾಗುತ್ತಿತ್ತು. ಈಗ ಹೆಸರಷ್ಟೇ ಉಳಿದಿದೆ; ಕವಡೆ ನೋಡಲು ಸಿಗುವುದಿಲ್ಲ.

ಇಲ್ಲಿತನಕ ನಾವು ಸೇವಾಶ್ರಮದ ಬಗ್ಗೆ ನೋಡಿದೆವು. ಇನ್ನು ಕಾಶೀಧಾಮದ ಬಗ್ಗೆ ಅರಿತುಕೊಂಡು, ಈ ಲೇಖನಕ್ಕೆ ಇತಿಶ್ರೀ ಹಾಡೋಣ. ಕಾಶಿಗೆ ಕಾಶಿಯೇ ಸಾಟಿ; ಅದಕ್ಕೆ ಸರಿಸಮಾನವಾಗಿರುವ ಕ್ಷೇತ್ರ ಇನ್ನೊಂದಿಲ್ಲ. ಪುರಾಣಗಳ ಪ್ರಕಾರ ವಿಶ್ವನಾಥನು ತನಗಾಗಿಯೇ ಕಾಶಿಯನ್ನು ಸೃಷ್ಟಿ ಮಾಡಿಕೊಂಡಿದ್ದಾನೆ ('ಕಾಶ್ಯತೇ ಪ್ರಕಾಶಯತೇ ಇತಿ ಕಾಶೀ'). ವರುಣಾ ಮತ್ತು ಅಸೀ ಎಂಬ ಎರಡು ನದಿಗಳು ಇಬ್ಬದಿಯಲ್ಲಿ ಹರಿಯುವುದರಿಂದ 'ವಾರಾಣಸಿ' ಎಂದೂ ಕರೆಯಲ್ಪಡುತ್ತದೆ. ಎಲ್ಲವನ್ನೂ ಕಳೆದುಕೊಂಡ ರಾಜಾ ಹರಿಶ್ಚಂದ್ರನಿಗೆ ಜಗತ್ತಿನಲ್ಲಿ ಬೇರೆ ಎಲ್ಲಿಯೂ ಜಾಗ ಸಿಗದ

ಕಾರಣ ಅವನು ಕಾಶಿಗೆ ಬಂದು ತನ್ನನ್ನು ತಾನೇ ಅಡವು ಇಟ್ಟು ಕೊಳ್ಳುತ್ತಾನೆ.

ಇತಿಹಾಸದ ದೃಷ್ಟಿಯಿಂದ ಅವಲೋಕಿಸಿದರೂ, ಕಾಶೀ ಧಾಮವು ಜಗತ್ತಿನಲ್ಲಿ ಅತ್ಯಂತ ಪ್ರಾಚೀನ ನಗರ. ಇದಕ್ಕಿಂತ ಪ್ರಾಚೀನ ನಗರ ಯಾವುದೆಂದು ಯಾರಿಗೂ ಗೊತ್ತಿಲ್ಲ. ರಾಮಾಯಣದ ಕಾಲಕ್ಕಿಂತಲೂ ಕಾಶೀಕ್ಷೇತ್ರವು ಅತ್ಯಂತ ಪ್ರಾಚೀನ. ಕಾಶೀಕ್ಷೇತ್ರವು ಸೃಷ್ಟಿಯಾದ ಮೇಲೆ ಭಾಗೀರಥಿಯು ಬಿಜಯಂಗೈದಳು. ಹಲವು ಕಾಲ ಮುಸಲ್ಮಾನ ದೊರೆಗಳು ಕಾಶೀಕ್ಷೇತ್ರವನ್ನೂ ಧ್ವಂಸ ಮಾಡಿದರೂ, ಕಾಶೀಕ್ಷೇತ್ರವು ತನ್ನ ಮೈ ಕೊಡವಿ, ಮೇಲೆದ್ದು ತನ್ನ ಗತಕಾಲದ ವೈಭವವನ್ನು ಮೈದುಂಬಿಸಿಕೊಂಡಿದೆ. ಅಧರ್ಮವನ್ನೇ ತನ್ನ ಭೂಷಣವಾಗಿ ಧರಿಸಿದ್ದ ಔರಂಗಜೇಬನು ಹದಿನಾರನೇ ಶತಮಾನದಲ್ಲಿ ಈ ಕ್ಷೇತ್ರವನ್ನು ಅಕ್ಷರಶಃ ಧ್ವಂಸಮಾಡಿದ್ದ. ಆ ಸಮಯದಲ್ಲಿ ಅರ್ಚಕರು ಮುಸಲ್ಮಾನ ಸೈನಿಕರಿಂದ ತಪ್ಪಿಸಿಕೊಳ್ಳಲು ಇಲ್ಲಿರುವ ಎಲ್ಲ ದೇವರ ಮೂರ್ತಿಗಳನ್ನು ಸಿಕ್ಕಿಸಿಕ್ಕಿದಲ್ಲಿ ಅಡಗಿಸಿಟ್ಟಿದ್ದರು. ಹಾಗಾಗಿ ಈಗಲೂ ಚಿಕ್ಕಚಿಕ್ಕ ದೇವಸ್ಥಾನಗಳು ಇಲ್ಲಿ ಬಹಳ ಮಹತ್ವವನ್ನು ಪಡೆದಿವೆ. ಕೆಲವು ಮನೆಗಳೇ ಈಗ ಗುಡಿಗಳಾಗಿ ಪರಿವರ್ತನೆಹೊಂದಿವೆ. ಈಗ ಇರುವ ವಿಶ್ವನಾಥನ ಗರ್ಭಗುಡಿಯನ್ನು ಮರಾಠ ರಾಣಿ ಅಹಲ್ಯಾಬಾಯಿ ಹೋಳ್ಕರ್ ಪ್ರತಿಷ್ಠಾಪಿಸಿದಳು. ಹಳೆಯ ದೇವಸ್ಥಾನ ಇರುವ ಜಾಗದಲ್ಲಿ ಈಗ ಮಸೀದಿ ಇದೆ. ಹಳೆಯ ದೇವಸ್ಥಾನದ ಕುರುಹಾಗಿ ನಂದಿಯ ವಿಗ್ರಹವು ಈಗಲೂ ಮಸೀದಿಗೆ ಮುಖಮಾಡಿ ಕುಳಿತಿರುವುದನ್ನು ಭಕ್ತರು ನೋಡಬಹುದು.

ಸಾರಂಗನಾಥನ ಶಿವ ದೇವಸ್ಥಾನವಿರುವ ಸಾರಂಗನಾಥದಲ್ಲಿಯೆ ಭಗವಾನ್ ಬುದ್ಧದೇವರು ಶಿಷ್ಯರಿಗೆ ತನ್ನ ಮೊದಲ ಉಪದೇಶವನ್ನು ಕೊಟ್ಟು ಬೌದ್ಧಧರ್ಮಕ್ಕೆ ಚಾಲನೆ ಕೊಟ್ಟಿದ್ದು. ಸಾರಂಗನಾಥವೇ ಈಗ ಸಾರನಾಥ ಆಗಿದೆ; ಅದು ಕಾಶಿಯಿಂದ ಐದಾರು ಮೈಲು ದೂರವಿದೆ. ಆಚಾರ್ಯತ್ರಯರಾದ ಶ್ರೀಶಂಕರ ಭಗವತ್ಪಾದರು, ಶ್ರೀರಾಮಾನುಜಾಚಾರ್ಯರು ಮತ್ತು ಶ್ರೀಮಧ್ವಾಚಾರ್ಯರು ಕಾಶಿಗೆ ಭೇಟಿ ಕೊಟ್ಟು, ಇಲ್ಲಿ ಕೆಲವಾರು ತಿಂಗಳು ತಪಸ್ಸು ಮಾಡಿದ್ದಾರೆ. ಕಾಶೀಕ್ಷೇತ್ರಕ್ಕೂ ಶಂಕರ ಭಗವತ್ಪಾದರಿಗೂ ಅವಿನಾಭಾವ ಸಂಬಂಧ. ಅವರ ಜೀವನ ಚರಿತ್ರೆ ಅಧ್ಯಯನ ಮಾಡಿದವರಿಗೆ ಇದು ವೇದ್ಯವಾಗಿರುತ್ತದೆ. ಕಾಶೀಪಂಚಕ, ಮನೀಷಾಪಂಚಕ, ಅನ್ನಪೂರ್ಣ ಸ್ತೋತ್ರ, 'ಭಜಗೋವಿಂದಂ' ಇತ್ಯಾದಿ ಹಲವಾರು ಸ್ತೋತ್ರಗಳನ್ನು ವಿಶೇಷವಾಗಿ ಮಣಿಕರ್ಣಿಕಾ ಘಟ್ಟದಲ್ಲಿಯೆ ರಚಿಸಿದ್ದಾರೆ. ಶಂಕರಾಚಾರ್ಯರಿಗೆ ಮತ್ತು ಚಂಡಾಲ ನೋರ್ವನಿಗೆ ಪರಮ ಬ್ರಹ್ಮ ತತ್ತ್ವವನ್ನು ಕುರಿತು ಜಿಜ್ಞಾಸೆ ನಡೆದಿದ್ದು ಕೂಡ ಮಣಿಕರ್ಣಿಕಾ ಘಾಟಿನ ಸೋಪಾನದ ಮೇಲೆ ಎಂದು ಇತಿಹಾಸ ಹೇಳುತ್ತದೆ. ವೃದ್ಧನೊಬ್ಬ ವ್ಯಾಕರಣದ - 'ಡುಕೃಞ್‌ಕರಣೇ' ಶಬ್ದವನ್ನು ಬಾಯಿಪಾಠ ಮಾಡುವುದನ್ನು ನೋಡಿ ಕರುಣಾಮಯಿ ಶಂಕರಾಚಾರ್ಯರು, ವೃದ್ಧನ ಮೇಲೆ ಕರುಣೆ ತೋರಿ, ''ಹೇ ಮೂಢಮತೇ, ವೃದ್ಧಾಪ್ಯದಲ್ಲಿ ಗೋವಿಂದನ ನಾಮಸ್ಮರಣೆ ಮಾಡು. 'ಡುಕೃಞ್‌ಕರಣೇ' ನಿನ್ನನ್ನು ರಕ್ಷಿಸುವುದಿಲ್ಲ'' ಎಂದು ಹೇಳಿ ಪಾಮರರಿಗೆಲ್ಲಾ ಅನ್ವಯವಾಗುವ 'ಭಜ ಗೋವಿಂದಮ್' ಸ್ತೋತ್ರವನ್ನು ಇದೇ ಕಾಶೀಕ್ಷೇತ್ರದಲ್ಲಿ ರಚಿಸಿದರು. ಪ್ರಸಿದ್ಧವಾದ ತುಲಸೀರಾಮಾಯಣದ ಕರ್ತೃ ಸಂತ ತುಲಸೀದಾಸರು ಕಾಶೀಧಾಮದಲ್ಲಿಯೇ ವಾಸ ಮಾಡಿ 'ತುಲಸೀ ರಾಮಾಯಣ'ವನ್ನು ರಚಿಸಿದರು.

ವಾರಣಾಸಿ ಕ್ಷೇತ್ರದಲ್ಲಿ ಹೆಚ್ಚಿನ ಸಂಖ್ಯೆಯ ಸಂಸ್ಕೃತ ಪಾಠಶಾಲೆಗಳಿವೆ. ನ್ಯಾಯ, ವ್ಯಾಕರಣ, ಮೀಮಾಂಸೆ, ವೇದಾಂತ — ವಿವಿಧ ಶಾಸ್ತ್ರಗಳಲ್ಲಿ ಪಳಗಿದ ಪ್ರಕಾಂಡ ಪಂಡಿತರಿದ್ದಾರೆ. ಕಾಶೀಧಾಮದ ಗಲ್ಲಿಗಲ್ಲಿಗಳಲ್ಲಿಯೂ ಮಠ, ಆಶ್ರಮ, ಅಖಾಡಗಳಿವೆ. ಸಹಸ್ರಾರು ಸಾಧುಸಂತರು ಅಧ್ಯಯನ, ತಪಸ್ಸುಗಳಲ್ಲಿ ನಿರತರಾಗಿದ್ದರೆ. ಜಗತ್ತಿನ ಯಾವುದೇ ದೇವಸ್ಥಾನದಲ್ಲಿರದ ವಿಶಿಷ್ಟ ಪೂಜೆಗಳು ವಿಶ್ವಕ್ಕೆ ಒಡೆಯನಾದ ವಿಶ್ವನಾಥನಿಗೆ ಸಲ್ಲುತ್ತವೆ. ಕಾಶೀವಿಶ್ವನಾಥನಿಗೆ ಮಧ್ಯರಾತ್ರಿ ೨-೩೦ಕ್ಕೆ ಪೂಜೆ-ಅಭಿಷೇಕ-ಆರತಿ ಆರಂಭವಾಗಿ ರಾತ್ರಿ ಹನ್ನೊಂದು ಘಂಟೆಯ ತನಕ ನಡೆಯುತ್ತದೆ. ರಾತ್ರಿ ಹನ್ನೊಂದು ಘಂಟೆಗೆ ವಿಶ್ವನಾಥನಿಗೆ ವಿಶ್ರಾಂತಿ. ಹೀಗೆ ಬೆಳಗ್ಗಿನಿಂದ ರಾತ್ರಿ ತನಕ ನಾಲ್ಕು ಸಲ ಆರತಿ ಆಗುತ್ತದೆ. ಇಡೀ ಕಾಶೀಕ್ಷೇತ್ರವೇ ಒಂದು ಜ್ಯೋತಿರ್ಲಿಂಗ. ವರುಣಾ ಮತ್ತು ಅಸೀ ನದಿಗಳ ಮಧ್ಯೆ ಅರ್ಧಚಂದ್ರಾಕೃತಿಯಲ್ಲಿ ಕಾಶೀಕ್ಷೇತ್ರವಿದೆ. ಹಾಗಾಗಿ ಇದಕ್ಕೆ 'ವಾರಾಣಸಿ' ಎಂದು ಹೆಸರಾಗಿದೆ. ಪರಮಪಾವನೆಯಾದ ಜಾಹ್ನವಿಯು ಮೂಡಣದಿಕ್ಕಿನಿಂದ ಹರಿಯುವವಳು ದಶಾಶ್ವಮೇಧ ಘಾಟಿಗೆ ಬಂದು ದಿಢೀರೆಂದು ಬಡಗಣ ದಿಕ್ಕಿಗೆ ಹರಿಯುವುದನ್ನು ನೋಡುವುದೇ ಕಣ್ಣಿಗೊಂದು ಹಬ್ಬ.

ಕಾಶೀಕ್ಷೇತ್ರದಲ್ಲಿ ನೂರಾರು ದೇವಸ್ಥಾನಗಳಿವೆ. ಆದರೆ ಭಕ್ತರು ಮುಖ್ಯವಾಗಿ ದರ್ಶಿಸಲು ಹೋಗುವ ಕೆಲವೊಂದು ದೇವಾಲಯಗಳನ್ನು ಇಲ್ಲಿ ಪಟ್ಟಿಮಾಡಬಹುದು. ವಿಶ್ವನಾಥನ ಸನ್ನಿಧಿ, ತಾಯಿ ಅನ್ನಪೂರ್ಣೆಯ ದೇವಸ್ಥಾನ, ಶಕ್ತಿಪೀಠ ಶ್ರೀವಿಶಾಲಾಕ್ಷಿ ಮಂದಿರ, ವಿಶ್ವನಾಥನ ದ್ವಾರಪಾಲಕ ಶ್ರೀ ಕಾಲಭೈರವ, ಮೃತ್ಯುಂಜಯ ಶಿವ, ವೀರೇಶ್ವರ ಶಿವ, ಬಿಂದುಮಾಧವ ದೇವಸ್ಥಾನ, ತ್ರೈಲಂಗ ಸ್ವಾಮಿಗಳ ಸಮಾಧಿ (ಧ್ಯಾನಮಂದಿರ), ಪಾರ್ಥಿವ ಶರೀರವನ್ನು ಪಂಚಭೂತಗಳಿಗೆ ಸಮರ್ಪಿಸುವ ಮಣಿಕರ್ಣಿಕಾ ಘಾಟ್, ರಾಜಾ ಹರಿಶ್ಚಚಂದ್ರನ ಘಾಟ್, ಕೇದಾರನಾಥ ಶಿವ, ತಿಲಭಾಂಡೇಶ್ವರ ದೇವಸ್ಥಾನ, ಸಂಕಟಮೋಚನ ಹನುಮಾನ್ ಮಂದಿರ ಇತ್ಯಾದಿ. ಶ್ರೀ ಮದನಮೋಹನ ಮಾಳವೀಯರು ಸ್ಥಾಪಿಸಿದ ಪ್ರಸಿದ್ಧ ಬನಾರಸ್ ಹಿಂದೂ ವಿಶ್ವವಿದ್ಯಾಲಯ ಇಲ್ಲೇ ಇದೆ.

ಕಾಶೀಕ್ಷೇತ್ರದ ಬಗ್ಗೆ ಶ್ರೀ ಗುರುಮಹಾರಾಜರು ಮತ್ತು ಶ್ರೀಮಾತೆಯವರು ಹೇಳಿದ ಮಹತ್ವವನ್ನು ಇಲ್ಲಿ ಉಲ್ಲೇಖಿಸಿದರೆ ಭಕ್ತರ ಭಕ್ತಿಯು ಇನ್ನಷ್ಟು ವೃದ್ಧಿಗೊಳ್ಳುವುದರಲ್ಲಿ ಸಂಶಯವಿಲ್ಲ. ದೇವಮಾನವ ಶ್ರೀರಾಮಕೃಷ್ಣರು ಕಾಶೀಕ್ಷೇತ್ರಕ್ಕೆ ಎರಡು ಸಲ ಭೇಟಿ ಕೊಟ್ಟಿದ್ದರು. ಕೇದಾರನಾಥನ ದೇವಸ್ಥಾನದ ಹತ್ತಿರ ಇಳಿದುಕೊಂಡಿದ್ದ ಆ ಮನೆಯನ್ನು ನಾವು ಈಗಲೂ ನೋಡಬಹುದು.

ಶ್ರೀರಾಮಕೃಷ್ಣ ಲೀಲಾಪ್ರಸಂಗದಲ್ಲಿ ಉಲ್ಲೇಖಿಸಿದಂತೆ – ಗುರು ಮಹಾರಾಜರು ವಿಶ್ವನಾಥನ ಆರತಿ ಸಮಯದಲ್ಲಿ ಭಾವಾವಿಷ್ಟ ರಾಗುತ್ತಿದ್ದರು. ಕೇದಾರನಾಥನ ದೇವಸ್ಥಾನದಲ್ಲಿ ಅವರಿಗೆ ವಿಶೇಷ ಭಾವಾವಸ್ಥೆ ಬಂದಿತ್ತು. ಮಣಿಕರ್ಣಿಕಾ ಘಾಟಿನಲ್ಲಿ ಆಗ ವಾಸಿಸುತ್ತಿದ್ದ ಮಹಾನ್ ಸಂತ ತ್ರೈಲಂಗ ಸ್ವಾಮಿಗಳನ್ನು ದರ್ಶಿಸಲು ಅವರು ಹಲವು ಸಲ ಹೋಗಿದ್ದರು. ಶ್ರೀರಾಮಕೃಷ್ಣರು ಅವರನ್ನು ಪರೀಕ್ಷಿಸಿ, 'ಇವರಲ್ಲಿ ನಿಜವಾದ ಪರಮಹಂಸನ ಲಕ್ಷಣಗಳಿವೆ, ಇವರು ಸಾಕ್ಷಾತ್ ವಿಶ್ವೇಶ್ವರ' ಎಂದಿದ್ದರು. ಗಂಗೆಯಲ್ಲಿ ದೋಣಿಯ ಮೂಲಕ ಪ್ರಯಾಣಿಸುವಾಗ ಮಣಿಕರ್ಣಿಕಾ ಘಾಟಿನಲ್ಲಿ ಅವರಿಗೆ ದಿಢೀರನೆ ಭಾವಸಮಾಧಿಯುಂಟಾಯಿತು. ಅನಂತರ ತಮ್ಮ ಅನುಭವವನ್ನು ಅವರು ಹೀಗೆ ಹೇಳಿದ್ದರು: ''ಮಣಿಕರ್ಣಿಕಾ ಘಾಟಿನಲ್ಲಿ ಚಿತೆಯ ಮೇಲೆ ಮಲಗಿದ್ದ ಪ್ರತಿಯೊಂದು ದೇಹದ ಬಳಿ, ಕಂದುಬಣ್ಣದ ಜಟಾಧಾರಿಯೊಬ್ಬನು ದೇಹವನ್ನು ಎತ್ತಿ ಹಿಡಿದು ತಾರಕಮಂತ್ರವನ್ನು ಉಚ್ಚರಿಸುತ್ತಿದ್ದನು. ಜಗದಂಬೆಯು ಮಹಾಕಾಳಿ ರೂಪದಲ್ಲಿ ಇನ್ನೊಂದೆಡೆ ಕುಳಿತು ಸ್ಥೂಲ, ಸೂಕ್ಷ್ಮ, ಕಾರಣಗಳ ಸಂಸ್ಕಾರ ಬಂಧನವನ್ನು ಸ್ವತಃ ತನ್ನ ಕೈಯಾರೆ ಬಿಡಿಸಿ ನಿರ್ವಾಣದ್ವಾರವನ್ನು ತೆರೆದು ತನ್ನ ಕೈಯಿಂದಲೇ ಮುಕ್ತಿಯನ್ನು ನೀಡುತ್ತಿದ್ದಳು. ಅನೇಕ ಯುಗಗಳ ತಪಸ್ಸಿನಿಂದ ಪಡೆಯುವ ಅದ್ವೈತಾನುಭವದ ಪರಮಾನಂದವನ್ನು ಒಂದೇ ಕ್ಷಣದಲ್ಲಿ ಜೀವಿಯು ಪಡೆಯುವಂತೆ ವಿಶ್ವನಾಥನು ಅನುಗ್ರಹಿಸುತ್ತಿದ್ದನು.''

ಶ್ರೀಮಾತೆ ಶಾರದಾದೇವಿಯವರು ೧೮೮೬ ಮತ್ತು ೧೯೧೨ರಲ್ಲಿ ಎರಡು ಸಲ ವಾರಣಾಸಿಗೆ ತೀರ್ಥಯಾತ್ರೆಗೆ ಬಂದಿದ್ದರು. ಶ್ರೀಮಾತೆಯವರು ಕಾಶೀಕ್ಷೇತ್ರದಲ್ಲಿ ಹಲವಾರು ತಪಸ್ವೀ ಸಾಧು ಸಂತರನ್ನು ದರ್ಶಿಸಿ ಅವರಿಗೆ ಫಲಕಾಣಿಕೆಗಳನ್ನು ಅರ್ಪಿಸಿ ಪ್ರಣಾಮ ಮಾಡಿದ್ದರು. ತಿಲಭಾಂಡೇಶ್ವರ ಶಿವಲಿಂಗವನ್ನು ನೋಡಿ, 'ಇದು ಸ್ವಯಂಭೂ ಶಿವಲಿಂಗ' ಎಂದಿದ್ದರು. ಕೇದಾರನಾಥನ ದರ್ಶನ ಮಾಡಿ, ''ಈ ಕೇದಾರ ಸ್ವಾಮಿಯೂ ಒಂದೆ, ಹಿಮಾಲಯದ ಕೇದಾರನಾಥ ಸ್ವಾಮಿಯೂ ಒಂದೇ. ಈ ಕೇದಾರನಾಥನ ದರ್ಶನ ಮಾಡಿದರೆ ಹಿಮಾಲಯದ ಕೇದಾರನ ದರ್ಶನ ಮಾಡಿದ ಹಾಗೆ'' ಎಂದಿದ್ದರು. ನಾವು ತೀರ್ಥಕ್ಷೇತ್ರದ ದರ್ಶನಕ್ಕೆ ಹೋಗುತ್ತೇವೆ; ಆದರೆ ಅಲ್ಲಿಯ ಸ್ಥಳ ಪುರಾಣದ ಮಾಹಿತಿಯೇ ನಮಗಿರುವುದಿಲ್ಲ. ಕೆಲವು ಕಡೆ ಲಿಖಿತ ರೂಪದಲ್ಲಿ ಸಿಕ್ಕರೂ ಕೂಡ ಅದರಲ್ಲಿ ಲಭಿಸುವ ಮಾಹಿತಿಯಲ್ಲಿ ಕುಂದುಕೊರತೆಗಳಿರುತ್ತವೆ. ಆದರೆ ಮಹಾಪುರುಷರು ಇಂತಹ ಕ್ಷೇತ್ರಗಳಿಗೆ ಹೋದ ತಕ್ಷಣ ಅಲ್ಲಿಯ ಮಾಹಾತ್ಮ್ಯ ಅವರ ಕಣ್ಣೆದುರಿಗೆ ಬಂದು ನಿಲ್ಲುತ್ತದೆ.

ಮಣಿಕರ್ಣಿಕಾ ಘಾಟಿನಿಂದ ಸ್ವಲ್ಪ ದೂರ ಕ್ರಮಿಸಿದರೆ ವೀರೇಶ್ವರ ಶಿವ ದೇವಸ್ಥಾನವಿದೆ. ಈ ದೇವಸ್ಥಾನಕ್ಕೂ ಶ್ರೀರಾಮಕೃಷ್ಣ ಮಠಕ್ಕೂ ವಿಶೇಷವಾದ ಸಂಬಂಧವಿದೆ. ವಿವೇಕಾನಂದರ ಜನನಿ ಶ್ರೀಮತಿ ಭುವನೇಶ್ವರೀದೇವಿಯು ಇದೇ ವೀರೇಶ್ವರನಲ್ಲಿ ತನಗೊಂದು ಗಂಡು ಮಗುವನ್ನು ನೀಡಿ ಹರಸೆಂದು ಹರಕೆ ಹೊತ್ತಿದ್ದರು. ಶ್ರೀಗುರುಮಹಾರಾಜರು, ''ನರೇಂದ್ರನ ಜನನದ ಸಮಯದಲ್ಲಿ ಕಾಶೀಕ್ಷೇತ್ರದಿಂದ ಬೆಳಕಿನ ಕಿರಣಗಳು ಕಲ್ಕತ್ತಾ ಕಡೆಗೆ ಬರುವುದನ್ನು ನೋಡಿದ್ದೆ'' ಎಂದು ಹೇಳುತ್ತಿದ್ದರು. ಅವರು ಇನ್ನೂ ಒಂದು ವಿಚಾರವನ್ನು ಹೇಳುತ್ತಿದ್ದರು: ''ನರೇಂದ್ರನು, ಸಾಮಾನ್ಯನಲ್ಲ. ಅವನು ಸಪ್ತಋಷಿಗಳಲ್ಲಿ ಒಬ್ಬ, ಈ ಧರೆಗೆ ಇಳಿದು ಬಂದಿದ್ದಾನೆ.'' ಅವತಾರ ಪುರುಷರ ಈ ಶ್ರೇಷ್ಠ ನುಡಿಗಳನ್ನು ಜನಸಾಮಾನ್ಯರಿಂದ ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ. ಗುರು–ಶಿಷ್ಯರ ಸಂಬಂಧಗಳು ಯುಗ ಯುಗಾಂತರಕ್ಕೆ ಸಂಬಂಧಪಟ್ಟವುಗಳು. ಸ್ವಾಮಿ ವಿವೇಕಾನಂದರು ಪಾಶ್ಚಾತ್ಯದೇಶಗಳಿಗೆ ಹೋಗುವ ಮೊದಲು ಮತ್ತು ಅನಂತರ ಕೂಡ ಕಾಶೀಕ್ಷೇತ್ರದಲ್ಲಿ ಬಹಳ ಸಮಯವನ್ನು ಕಳೆದಿದ್ದರು. ಸ್ವಾಮಿ ವಿವೇಕಾನಂದರ ಜೀವನ ಚರಿತ್ರೆಯಲ್ಲಿ ಕಾಶೀಕ್ಷೇತ್ರದಲ್ಲಿ ನಡೆದ ಎಷ್ಟೋ ಘಟನೆಗಳನ್ನು ನಾವು ನೋಡಬಹುದು. ಸ್ವಾಮಿ ರಾಮಕೃಷ್ಣಾನಂದಜಿಯವರು ಬಹುಶಃ ಕಾಶೀಕ್ಷೇತ್ರಕ್ಕೆ ಬಂದಿರಲಿಲ್ಲ. ಶ್ರೀ ಗುರುಮಹಾರಾಜರ ಉಳಿದ ಎಲ್ಲ ಶಿಷ್ಯರುಗಳು ಕಾಶಿಗೆ ಬಂದು ತಪಸ್ಸು ಮಾಡಿದ್ದಾರೆ. ಪ್ರಾರಂಭದಲ್ಲಿ ಹೇಳಿದ ಹಾಗೆ ಸ್ವಾಮಿ ನಿರಂಜನಾನಂದಜಿಯವರು ೧೮೯೯ರಲ್ಲಿ ಕಾಶೀಕ್ಷೇತ್ರದಲ್ಲಿ ಶ್ರೀ ಗುರುಮಹಾರಾಜರ ಪೂಜೆ ಮಾಡಿದ್ದರು. ಸ್ವಾಮಿ ಅದ್ಭುತಾನಂದಜಿ ಮತ್ತು ಸ್ವಾಮಿ ತುರೀಯಾನಂದಜಿಯವರು ತಮ್ಮ ಜಡ ದೇಹವನ್ನು ಕಾಶೀಧಾಮದಲ್ಲಿಯೇ ತ್ಯಜಿಸಿದ್ದರು. ಈ ಹಿನ್ನೆಲೆಯಲ್ಲಿ ಕಾಶೀ ಸೇವಾಶ್ರಮಕ್ಕೆ ಮತ್ತು ಅದ್ವೈತ ಆಶ್ರಮಕ್ಕೆ ಬಹಳ ಮಹತ್ವವಿದೆ. ಈ ಎರಡು ಆಶ್ರಮಗಳಲ್ಲಿ ಶ್ರೀಮಾತೆ ಮತ್ತು ಗುರುಮಹಾರಾಜರ ಶಿಷ್ಯರುಗಳು ಓಡಾಡಿದ್ದಾರೆ. ರಾಮಕೃಷ್ಣ ಅದ್ವೈತ ಆಶ್ರಮದಲ್ಲಿ ಸ್ವಾಮಿ ಅದ್ಭುತಾನಂದಜಿ ಉಪಯೋಗಿಸಿದ ಕೆಲವು ವಸ್ತುಗಳನ್ನು ಕಾಪಿಟ್ಟಿದ್ದಾರೆ; ಭಕ್ತರು ಈಗಲೂ ಅವುಗಳನ್ನು ನೋಡಬಹುದು. ಅದೇ ರೀತಿ, ಸ್ವಾಮಿ ತುರೀಯಾನಂದಜಿ ಇದ್ದ 'ಅಂಬಿಕಾ ಭವನ'ವನ್ನು ಕೂಡಾ ನೋಡಬಹುದು. ಕಾಶೀಖಂಡ (ಪುರಾಣ)ದಲ್ಲಿ ಉಲ್ಲೇಖಿಸಿದ ಶಿವೇಶ್ವರ ಶಿವಾಲಯವು ಕೂಡ ಸೇವಾಶ್ರಮದ ಆವರಣದಲ್ಲಿ ಇದೆ. ಇಲ್ಲಿ ಪ್ರತಿದಿನ ಪೂಜೆ–ಅಭಿಷೇಕಗಳು ನಡೆಯುತ್ತವೆ. ಸ್ವಾಮೀಜಿಯವರ ಮಹಾಸಮಾಧಿ ಆದ ಮೇಲೆ ಅವರ ಅಸ್ಥಿಯನ್ನು ಇಟ್ಟು, ಅವರ ಹೆಸರಲ್ಲಿ ಒಂದು ದೇವಸ್ಥಾನ ಕೂಡ ಇದೆ. ಶ್ರೀಗುರುಮಹಾರಾಜರ ದೇವಾಲಯವು ಚಿಕ್ಕದಾಗಿದ್ದರೂ ಅದ್ಭುತವಾದ ಶಿಲ್ಪಕಲೆಯನ್ನು ಅಲ್ಲಿ ರಚಿಸಿದ್ದಾರೆ. ಸ್ವಾಮಿ ವಿವೇಕಾನಂದರ ಜಯಂತಿಯ ನಂತರ ಬರುವ ಭಾನುವಾರದಂದು 'ನಾರಾಯಣ ಪೂಜೆ'ಯನ್ನು ಅತ್ಯಂತ ವಿಜೃಂಭಣೆಯಿಂದ ಆಚರಿಸಲಾಗುತ್ತದೆ. ಇದೊಂದು ವಿಶಿಷ್ಟವಾದ ಪೂಜೆ. ಇಲ್ಲಿ ನಡೆಯುವುದು ಜೀವಂತ ನಾರಾಯಣರ ಪೂಜೆ. ಆ ದಿನ ಪ್ರತಿಯೊಬ್ಬ ರೋಗಿಗೂ ಗಂಧ, ಪುಷ್ಪ, ಧೂಪ, ದೀಪಗಳೊಂದಿಗೆ ಪೂಜೆ ಮಾಡಿ ಶಾಲು, ಸೀರೆ, ಸಿಹಿತಿಂಡಿ ಪೊಟ್ಟಣಗಳನ್ನು ನಾರಾಯಣ ಭಾವದಲ್ಲಿ ಅರ್ಪಿಸಲಾಗುತ್ತದೆ.

*(ಸಮಾಪ್ತಿ)*

*ಆಧಾರ: 'ಸೇವಾ' ಎಂಬ ಬಂಗಾಳಿ ಗ್ರಂಥ ಮತ್ತು ಇತರ ಕೆಲವು ಪುಸ್ತಕಗಳು.*